ಆಮೆಯೊಂದಿಗೆ ಪಕ್ಷಿಗಳು ದೇವಲೋಕಕ್ಕೆ ಹಾರಿಹೋದವು. ದೇವೇಂದ್ರನ ಅರಮನೆಯೆಂದರೆ ಕೇಳಬೇಕೇ. ಅರಮನೆಯು ಭವ್ಯವಾಗಿ ಅಲಂಕೃತವಾಗಿತ್ತು. ದೇವೇಂದ್ರನು ಪಕ್ಷಿಗಳನ್ನೆಲ್ಲಾ ಆದರದಿಂದ ಸ್ವಾಗತಿಸಿದನು. ಆಮೆಯನ್ನು ನೋಡಿ ಅವನಿಗೆ ಆಶ್ಚರ್ಯವಾಯಿತು. ದೇವೇಂದ್ರನು ಆಮೆಯನ್ನು ವಿಶೇಷವಾಗಿ ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು.

ದೇವೇಂದ್ರನ ಆಸ್ಥಾನದಲ್ಲಿ ಪಕ್ಷಿಗಳೆಲ್ಲ ಸೇರಿಕೊಂಡು ವಿವಿಧ ವಿನೋದಾವಳಿ ಕಾರ್ಯಕ್ರಮ ಏರ್ಪಡಿಸಿ ಎಲ್ಲವೂ ಆನಂದಪಟ್ಟವು. ಬಳಿಕ ಆಮೆಯ ಜೊತೆಯಲ್ಲಿ ದೇವಲೋಕವನ್ನು ಸುತ್ತಾಡಿಕೊಂಡು ಬಂದವು. ಅಷ್ಟರಲ್ಲೇ ಸಂಜೆಯಾಗಿತ್ತು. ಅವುಗಳಿಗೆ ಹಸಿವಾಗಿತ್ತು. ದೇವೇಂದ್ರನು ಪಕ್ಷಿಗಳಿಗಾಗಿ ವಿಧವಿಧವಾದ ತಿಂಡಿ ತಿನಿಸುಗಳನ್ನು ತಯಾರಿಸಿ ಭೋಜನಕ್ಕೆ ಕರೆದನು. ಅಷ್ಟೊಂದು ತಿಂಡಿ ತಿನಿಸುಗಳನ್ನು ಆಮೆ ಎಂದೂ ಕಂಡೇ ಇರಲಿಲ್ಲ. ಅಲ್ಲಿರುವ ತಿಂಡಿ ತಿನಿಸುಗಳನ್ನು ನೋಡಿ ಆಮೆಯು 'ಇದೆಲ್ಲ ಯಾರಿಗಾಗಿ ತಯಾರಿಸಿದ್ದೀರಿ?' ಎಂದು ದೇವೇಂದ್ರನನ್ನು ಕೇಳಿತು.

ದೇವೇಂದ್ರನು, 'ಇಲ್ಲಿರುವ ತಿಂಡಿ ತಿನಿಸುಗಳು ಅತಿಥಿಗಳಿಗಾಗಿ' ಎಂದು ಉತ್ತರಿಸಿದನು.

ಆಮೆಯು ಕೂಡಲೆ ಅಲ್ಲಿರುವ ಪಕ್ಷಿಗಳನ್ನು ಉದ್ದೇಶಿಸಿ, 'ಸ್ನೇಹಿತರೇ, ದೇವೇಂದ್ರನು ಹೇಳಿರುವುದನ್ನು ಕೇಳಿದಿರಾ. ನನ್ನ ಹೆಸರು 'ಅತಿಥಿ' ಆಗಿರುವುದರಿಂದ ಇಲ್ಲಿರುವ ತಿಂಡಿ ತಿನಿಸುಗಳೆಲ್ಲವೂ ನನಗಾಗಿ ದೇವೇಂದ್ರನು ಮಾಡಿಸಿದ್ದಾನೆ. ಆದ್ದರಿಂದ ಮೊದಲು ನಾನು ತಿನ್ನುತ್ತೇನೆ. ಅನಂತರ ಏನಾದರೂ ಉಳಿದರೆ ನೀವು ತಿನ್ನಬಹುದು' ಎಂದು ಹೇಳುತ್ತಾ ಗಬ ಗಬನೇ ತಿನ್ನಲಾರಂಭಿಸಿತು.

ಆಮೆ ಮೋಸ ಮಾಡುತ್ತಿರುವುದನ್ನು ಕಂಡು ಪಕ್ಷಿಗಳಿಗೆ ಕೋಪ ಬಂದಿತು. ಅದಕ್ಕೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ಪಕ್ಷಿಗಳೆಲ್ಲವೂ ತೀರ್ಮಾನಿಸಿದವು. ಪಕ್ಷಿಗಳು ಆಮೆಗೆ ಕೊಟ್ಟಿದ್ದ ಪುಕ್ಕಗಳನ್ನೆಲ್ಲಾ ಒಂದೊಂದೊಂದಾಗಿ ವಾಪಸ್ಸು ತೆಗೆದುಕೊಂಡು ಬಿಟ್ಟವು. ಆಮೆಗೆ ಈಗ ರೆಕ್ಕೆಯಿಲ್ಲದೆ ಆಕಾಶದಲ್ಲಿ ನಿಲ್ಲಲು ಸಾಧ್ಯವಿಲ್ಲದಾಯಿತು. ಆಕಾಶದಿಂದ ಆಮೆ ಭೂಮಿಗೆ ದಬಕ್ ಎಂದು ಬಿದ್ದುಬಿಟ್ಟಿತು. ಆಮೆಯ ಮೈಮೇಲಿನ ಸುಂದರವಾದ ಚಿಪ್ಪು ಒಡೆದು ಚೂರು ಚೂರಾಗಿ ನೋವಿನಿಂದ ಚೀರಲು ಪ್ರಾರಂಭಿಸಿತು.

ಕೊಳದಲ್ಲಿ ವಾಸವಾಗಿದ್ದ ಆಮೆಯ ಮಿತ್ರರು ತಮ್ಮ ಮಿತ್ರನಿಗೆ ಬಂದಿರುವ ಸಂಕಟ ಕಂಡು 'ಅಯ್ಯೋ, ಪಾಪ' ಎಂದು ಮರುಗಿದವು. ಅವುಗಳೆಲ್ಲವೂ ಸೇರಿ ಆರೈಕೆ ಮಾಡಿ, ಒಡೆದಿರುವ ಚಿಪ್ಪಿಗೆ ತೇಪೆ ಹಾಕಿ ಕೂಡಿಸಿದವು. ಆಮೆಯ ಚಿಪ್ಪು ಅಂದಿನಿಂದ ತೇಪೆ ತೇಪೆಯಾಗಿದೆಯಂತೆ. ■



# ಅಣ್ಣ ತಂದ ಪೀಪಿ

■ **ಶಂಕರಾನಂದ ಹೆಬ್ಬಾಳ**

ಕಲೆ: ಸಂತೋಷ್ ಸಸಿಹಿತ್ಲು

ಅಣ್ಣ ತಂದ ಪೀಪಿಯಿಂದು
ಪಿಂಯ ಪಿಂಯ ಅನ್ನಲು
ಓಣಿತುಂಬ ಊದಿ ನಲಿದು
ಹರುಷದಲ್ಲಿ ನಲಿಯಲು

ಮೂರು ಕಾಸು ದುಡ್ಡು ಕೊಟ್ಟು
ಜಾತ್ರೆಯಲ್ಲಿ ತಂದನು
ಮೊಗದಲಿಂದು ಖುಷಿಯ ತೋರಿ
ಊದಿ ಸುಖವ ಕಂಡೆನು

ಪದನಿ ಸನಿದ ಸ್ವರವ ಹಾಡಿ
ಗೆಳೆಯರೆಲ್ಲ ನಲಿದರು
ಪೀಪಿ ಊದಿ ದಿನವ ಪೂರ್ತಿ
ತೋಷದಲ್ಲಿ ಕಳೆದರು

ಹರುಷ ತಂದ ಅಣ್ಣನನ್ನು
ನಾನು ಮನದಿ ನೆನೆಯುವೆ
ಕೃಷ್ಣನನ್ನು ದಿನವು ನುತಿಸಿ
ಪೀಪಿ ಹಿಡಿದು ನಿಲ್ಲುವೆ

## ಕುಂಚ ಪ್ರಪಂಚ





**ವಂಶಿಕ**
ಯುಕೆಜಿ, ವಿದ್ಯಾಸೌಧ ಪಬ್ಲಿಕ್ ಸ್ಕೂಲ್
ಹಾಸನ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in